**<u>ದಿನಾಂಕ: 24-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು ಎದುರದಾರರ ಪರ ಶ್ರೀ ಎಸ್.ಡಿ.ಎಸ್ ವಕೀಲರಿಂದ:</u>**

**5.** ಸನ್ 2014 ರಿಂದ 2016 ರವೆರೆಗೆ ಯಾರು ಪೊಸ್ಟ ಮೇನ್ ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ, ನನಗೆ ಸಹಿ ಮಾತ್ರ ಮಾಡಲು ಬರುತ್ತದೆ. ನಾನು 4-5 ವರ್ಷಗಳ ಹಿಂದೆ ಸಹಿ ಮಾಡಲು ಕಲಿತುಕೊಂಡಿರುತ್ತೇನೆ. ಅದಕ್ಕಿಂತ ಮುಂಚೆ ಹೆಬ್ಬಟ್ಟಿನ ಗುರುತನು ಹಾಕುತ್ತಿದ್ದೇನು. ನಾನು ಹೆಬ್ಬಟ್ಟಿನ ಗುರುತನು ಹಾಕುತ್ತಿದ್ದರು ಸಹ ಪ್ರಕರಣವನ್ನು ದಾರಿ ತಪ್ಪಿಸುವುದೋಸ್ಕರ ಸಹಿಯನು ಕಲಿತಿರುತ್ತೇನೆ ಎಂದರೆ ಸರಿಯಲ್ಲ.

6. ಎದುರುದಾರರು ನನ್ನ ವಿರುದ್ಧ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣ ಮಾಡಿರುವುದಿಲ್ಲ. ಈ ಅರ್ಜಿಯನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಎದುರುದಾರರು ಹಣ ನೀಡಬೇಕೆಂದು ಸಲ್ಲಿಸಿ ಅರ್ಜಿಯ ಮೇರೆಗೆ ನೋಟಿಸ ಬಂದ ನಂತರ ಗೊತ್ತಾಗಿರುತ್ತದೆ. ದಿನಾಂಕ ತಿಂಗಳು ನನಗೆ ಹೇಳಲು ಬರುವುದಿಲ್ಲ. ಅಂದಾಜು 2-3 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಗೊತ್ತಾದ ನಂತರ ವಕೀಲರಿಗೆ ಭೇಟಿ ಆಗಿರುತ್ತೇನೆ. ವಕೀಲರಿಗೆ ನೋಟಿಪಿಸು ಬಂದಿರುತ್ತದೆ ಎಂದು ತಿಳಿಸಿರುತ್ತೇನೆ. ಸದರಿಯವರಿಗೆ ವಕೀಲರಿಗೆ ಏನು ಮಾಡಬೇಕಾಗುತ್ತದೆ ಅದನು ಮಾಡಿ ಎಂದು ತಿಳಿಸಿರುತ್ತೇನೆ.

7. ದಾವೆ 2-3 ವರ್ಷಗಳ ಹಿಂದೆ ಮುಗಿದಿರುತ್ತದೆ ಎಂದು ಗೊತ್ತಾಗಿರುತ್ತದೆ. ಸದರಿ ದಾವೆಯ ಕಾಗದ ಪತ್ರಗಳನ್ನು ತಗೆದುಕೊಂಡಿರುವುದಿಲ್ಲ. 33 ತಿಂಗಳು 4 ದಿನ ವಿಳಂಬವನು ಮನ್ನಿಸಬೇಕೆಂದು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಷ್ಟು ದಿನಗಳು ವಿಳಂಬವಾಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

8. ಎದುರುದಾರರ ಜಾರಿ ಅರ್ಜಿ ನಂ.7/2018 ಸಲ್ಲಿಸಿದ ನೋಟಿ ಪ್ರತಿ ನನಗೆ ಬಂದಿರುವುದಿಲ್ಲ. ನನಗೆ ಎದುರುದಾರರು ನ್ಯಾಯಾಲಯದ ಮುಖಾಂತ 4 ನೋಟಿಸಗಳನ್ನು ಕಳುಹಿಸಿದ್ದು, ನಂತರ ಅಂಚೆ ಮೂಲಕ ನೋಟಿಸ ಕಳುಹಿಸಿದ್ದನು ತೀರಸ್ಕರಿಸಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 18.06.2019 ರಂದು ನ್ಯಾಯಾಲಯವು ನೋಟಿಸು ನೀಡಿದ್ದು, ಅದನು ತೀರಸ್ಕರಿಸಿದ ಕಾರಣ ನ್ಯಾಯಾಲಯವು ಏಕ ಪಕ್ಷಿವಾಗಿದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ನನಗೆ ನೋಟಿಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

9. ನನಗೆ ನೋಟಿಸು ಜಾರಿಯಾದರು ಸಹ ಜಾರಿಯಾಗಿಲ್ಲ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ನೋಟಿಸಿನಲ್ಲಿ ನಮೂದಿಸಿದ ಕಾರಣ ಎದುರುದಾರರ ವಿಳಾಸ ಇಟಗಿ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಇಟಗಿಯಿಂದ ಮನಗೂಳಿ 3-4 ಹರದಾರಿ ಇರುತ್ತದೆ. ಎದುರದಾರರಿಗೆ ಮನಗೂಳಿಯಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರದಾರು ಪರಿಚಯ ಇದ್ದಾರೆ ಇಲ್ಲವೋ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಮ್ಮ ಊರಿನಿಂದ ಮನಗೂಳಿ ಊರು ದೂರ ಇರುವ ಕಾರಣ ಪೊಸ್ಟ ಮೇನ್ ಮತ್ತು ಎದುರುದಾರಿರಿಗೆ ಸಂಪರ್ಕ ಇರುವುದಿಲ್ಲ ಎಂದರೆ ಸರಿ. ಎದುರುದಾರರು ಮತ್ತು ಪೊಸ್ಟ ಮೇನ್ ಒಟ್ಟಾಗಿ ಸೇರಿಕೊಂಡು ನೋಟಿಸ ಜಾರಿ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಸಾಕಷ್ಟು ಬಾರಿ ನೋಟಿಸು ಬಂದರು ಸಹ ನೋಟಿಸನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದಿಂದ ಪೊಸ್ಟ ಮೂಲಕ ನನಗೆ ಸಮನ್ಸ ಬಂದಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ಮುಖ್ಯ ವಿಚಾರಣೆಯ 6 ನೇ ಪ್ಯಾರದಲ್ಲಿ ಹೇಳಿದಂತೆ ಎದುರುದಾರಿನಿಗೆ 50,000/- ನೀಡಿರುತ್ತೇನೆ ಅಕ್ರಿಮೇಂಟ್ ಕ್ಯಾನ್ಸಲ್ ಆಗಿರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದರರು ಟ್ರ್ಯಾಕ್ಟರ ಟೇಲರನ್ನು ನೀಡಿಲ್ಲ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರ ಟೇಲರ ಎದುರುದಾರರ ಬಳಿ ಇದ್ದು, ಹಣವನ್ನು ಮರುಪಾವತಿ

ಮಾಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ಹಣ ನೀಡಬೇಕು ಅವರ ವಿರುದ್ಧ ನಾನು ಯಾವುದೆ ದಾವೆಯನ್ನು ಸಲ್ಲಿಸಿರುವುದಿಲ್ಲ ಮತ್ತು ಯಾವುದೇ ನೋಟಿಸನು ನೀಡಿರುವುದಿಲ್ಲ.

11. ಎದುರುದಾರರು ಮನಗೂಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಆಸ್ತಿ ಜಪ್ತು ಮಾಡಲು ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಆಸ್ತಿಯನ್ನು ಜಪ್ತು ಮಾಡಲು ಬಂದಾಗ ಗೊತ್ತಾಗಿರುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ನಮ್ಮ ಊರಿನಲ್ಲಿ ಯಾರಿಂದ ಆಸ್ತಿ ಜಪ್ತು ಮಾಡುತ್ತಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಊರಿನವರಿಂದ ಗೊತ್ತಾಗಿರುತ್ತದೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರ ಸಹ, ಊರಿನವರಿಂದ ಗೊತ್ತಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನೋಟಿಸ ಬಂದಿಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಪೊಸ್ಟ ಮೇನ್ ರವರಿಂದ ನೋಟಿಸ ಬಂದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನೋಟಿಸ ಮುಟ್ಟಿದ ಕಾರಣ ನ್ಯಾಯಾಲಯವು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನೋಟಿಸ ಮುಟ್ಟಿಲ್ಲ ಎಂದು ನುಡಿಯುತ್ತಾರೆ. O.S.No.502/2014 ರ ನೋಟಿಸ ತಲುಪಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 2-3 ವರ್ಷಗಳ ನಂತರ ಗೊತ್ತಾದ ನಂತರ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

12. ನನ್ನ ವಿಳಂಬವನ್ನು ಮನ್ನಿಸಬೇಕೆಂದು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರದಾರರಿಗೆ ಹಣ ನೀಡಬಾರದು ಎಂಬ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ವಜಾ ಮಾಡಬೇಕೆಂದರೆ ಸರಿಯಲ್ಲ. ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)
ದಿವಾಣಿ ನ್ಯಾಯಾಧೀಶರು ಮತ್ತು
ನ್ಯಾಯಿಕ ದಂಡಾಧಿಕಾರಿಗಳು
ಬಸವನ ಬಾಗೇವಾಡಿ.